ನಂ. 35. ತಾರೀಖು 4ನೇ ಮೇ 1876.

ಮದರಾಸ್ ಮೆಡಿಕೆಲ್ ಸಿಬ್ಬಂದಿಗೆ ಸೇರಿದ ಮತ್ತು ನಗರ ಡಿವಿಜ್ಯ ಆಫಿಸಿಯೇಟಿಂಗ್ ಸಿವಿಲ್ ಸರ್ಜ್ಯ ಆಗಿರುವ ಡಾಕ್ಟರ್ ಬ್ಯೆರ್ಸ್ ಸಾಹೆಬರು ಶಿವಮೊಗ್ಗೆಯಲ್ಲಿ ಜೆಯಿಲ್ ಜಾರ್ಜ್ ಸಹಾ ವುಂಟುಗಿರತಕ್ಕ ದ್ದು.

"ಬಮೋಜೀಬ್ ಹುಕ್ಕುಂ,"

J. S. F. MACKENZIE,
Offg. Secretary.

ಇಂಡ್ಯಗವರ್ಮೆಂಟಿನವರವಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಹೋಂ ಡಿಪಾರ್ಟ್‌ಮೆಂಟ್.

ಇಸ್ತಿಹಾರ್ ನಾಮೆಗಳು.

ಪಬ್ಲಿಕ್.

ಫೋರ್ಟ್ ವಿಲಿಯಂ, ತಾರೀಖು 12ನೇ ಏಪ್ರಿಲ್ 1876.

ನಂ. 713—1860ನೇ ಇಸವಿ 31ನೇ ನಂಬರ್ ಆಕ್ಟಿನ 22ನೇ ಸೆಕ್ಷರ್ಷ ದೆಶೆಯಿಂದ ವುಂಟುಮಾಡಲ್ಪಟ್ಟ ಅಧಿಕಾರ ಅನುಸರಿಸಿ ಮಂತ್ರಾಲೋಚಕ ಸಭೆಯೊಳಗಣ ಗವರ್ನ ಜನರಲ್ ಸಾಹೆಬರವರು, ಸದರೀ ವಿಷಯದೊಳಗೆ ಹುಟ್ಟಿದ ಹಿಂದಿನ ದರೋಬಸ್ತು ಹುಕ್ಕುಂಗಳನ್ನೂ ರದ್ದುಪಡಿಸಿ, ಬಂದೂಕ್ ವಗೈರೇ ಆಯುಧಗಳನ್ನೂ, ಆಯುಧಗಳ ಭಾಗಗಳನ್ನೂ, ಮಿಲಿಟೇರಿ ಸ್ಟೋರ್ಸ್ ಎಂಬ ಸೈನಿಕ ಸಾಮಾನುಗಳನ್ನೂ, ಶೀಸ, ಗಂಧಕ, ಬಾರೂದ್, ಮತ್ತು ಗುಂಡುಗಳು ವಗೈರೇ ಇತರ ಸಾಮಗ್ರಿಗಳನ್ನೂ, ಬ್ರಿಟಿಷ್ ಇಂಡ್ಯೆದಲ್ಲಿ ಬಂದು.ಸ್ಥಳ ಗವರ್ಮೆಂಟಿನ ಯಾ ಅಡ್‌ಮಿನಿಸ್ಟ್ರೇಷನಿನ ಅಧಿಕಾರ ಸರಹದ್ದಿನೊಳಗೆ ಇರುವ, ಯಾವ ಸ್ಥಳದಿಂದಲಾಗಲಿ, ಬ್ರಿಟಿಷ್ ಇಂಡ್ಯೆದೊಳಗೆ ಮತ್ತೊಂದು ಸ್ಥಳ ಗವರ್ಮೆಂಟಿನ ಯಾ ಅಡ್‌ಮಿನಿಸ್ಟ್ರೇಷನಿನ ಅಧಿಕಾರ ಸರಹದ್ದಿನೊಳಗೆ ಇರುವ ಯಾವ ಸ್ಥಳಕ್ಕಾಗಲಿ ರವಾನೇಯಾಗತಕ್ಕ ದ್ದನ್ನು, ಈ ಕೆಳಗೆ ನಮೂದಿಸುವ ರೂಲ್ಸು ಮತ್ತು ಷರತ್‌ಗಳನ್ನು ಅನುಸರಿಸಿ ಹೊರತು ಅನ್ಯೆಥಾ, ನಿಷೇಧಿಸಿ ಇರುತ್ತಾರೆ.

2. ಮೇಲೆ ಕಂಡ ಸಾಮಗ್ರಿಗಳ ಪೈಕಿ ಯಾವದನ್ನಾಗಲಿ ತನ್ನ ಸ್ವಂತ ಉಪಯೋಗಕ್ಕೊಸ್ಕರ ಯುಕ್ತವಾದ ಪರಿಮಾಣದಲ್ಲಿ ಹೊರತು ಅನ್ಯಥಾ ಲೈಸೆನ್ಸ್ ಅನುಸರಿಸಿದ ಆಯುಧಗಳು ಆಮದ್ ಆಗಬಹುದಾಗಿರುವ ಸಮುದ್ರತೀರ ಪಟ್ಟಣಗಳು ಯಾ ಸರಹದ್ದು ಸ್ಟೇಷರ್ಷಗಳು ಇವುಗಳ ಪೈಕಿ ಯಾವದರಿಂದಾಗಲಿ, ಯಾವದರ ಸರಹದ್ದಿನೊಳಗೆ ಅಂತಾ ಸಮುದ್ರತೀರ ಪಟ್ಟಣ ಯಾ ಸ್ಟೇಷರ್ಷ ಇರುತ್ತೋ ಅಂತಾ ಲೋಕಲ್ ಗವರ್ಮೆಂಟಿನ ಯಾ ಅಡ್‌ಮಿನಿಸ್ಟ್ರೇಷನಿನ ಸ್ಥಳ ಸರಹದ್ದಿಗೆ ಆಚೆಗೆ ಇರುವ ಬ್ರಿಟಿಷ್ ಇಂಡ್ಯೆದ ಬಳಕೇಮೆಗೆ ಸಾಗಿಸುವದಕ್ಕೆ ಅಪೇಕ್ಷಿಸುವ ಯಾವ ಮನುಷ್ಯನಾಗಲಿ, ಸಮುದ್ರತೀರ ಯಾ ಸ್ಟೇಷನಿಗೆ ಆಮದಿ ಮಾಡುವ ಬಗ್ಯೆ, 1860ನೇ ಇಸವಿ 31ನೇ ನಂಬರ್ ಲಕ್ಟಿನ 17ನೇ ಸೆಕ್ಷರ್ಷ ಅನುಸರಿಸಿ ಲೈಸೆನ್ಸ್ ಕೊಡಲಿಕ್ಕೆ ಇಂಡ್ಯಗವರ್ಮೆಂಟಿನವರಿಂದ ಅಧಿಕಾರ ಕೊಡಲ್ಪಟ್ಟ ಆಫಿಸರಿಗೆ ಪ್ಯಾಸ್ ಎಂಬ ರಹದಾರೀ ಬಗ್ಯೆ ಬರದುಕ್ಕೊಳ್ಳತಕ್ಕ ದ್ದು.

3. ಮೇಲಿನ ಕಡೇ ರೂಲಿನಲ್ಲಿ ಕಂಡ ಸಮುದ್ರ ತೀರ ಪಟ್ಟಣಗಳು ಯಾ ಸ್ಟೇಷರ್ಷಗಳು ಅಲ್ಲದೆ ಬ್ರಿಟಿಷ್ ಇಂಡ್ಯೆದೊಳಗೆ ಇರುವ ಬೇರೆ ಯಾವದಾದರೂ ಸ್ಥಳದಿಂದ, ಬ್ರಿಟಿಷ್ ಇಂಡ್ಯೆದೊಳಗೆ ಮತ್ತೊಂದು ಸ್ಥಳ ಗವರ್ಮೆಂಟ್ ಯಾ ಅಡ್‌ಮಿನಿಸ್ಟ್ರೇಷನಿನ ರಾಜ್ಯಗಳಲ್ಲಿ ಯ ಯಾವಸ್ಥಳಕ್ಕಾಗಲಿ ಅಂತಾ ಯಾವ ಪದಾರ್ಥಗಳನ್ನಾದರೂ, ಕಳುಹಿಸುವದಕ್ಕೆ ಬಬ್ಬ ಮನುಷ್ಯನು ಅಪೇಕ್ಷಿಸುವ ಪಕ್ಷಕ್ಕೆ ಅಂತಾಮನುಷ್ಯನು, ಹೋಂಡಿಪಾರ್ಟ್‌ಮೆಂಟಿನಲ್ಲಿ ಇಂಡ್ಯ ಗವರ್ಮೆಂಟ್ ಸೆಕರೆಟೆರಿಯವರಿಗೆ, ಅಥವಾ ಸದರೀ ಸಾಮಾನುಗಳನ್ನು ಯಾವ ಕೀವೆಯಿಂದ ಹೊರಗೆ ತೆಗದುಕ್ಕೊಂಡು ಹೋಗಲಿಕ್ಕೆ ಖಾಯಿಷ್‌ಮಾಡುತ್ತಾನೋ ಅಂತಾ ರಾಜ್ಯದ ಸ್ಥಳ ಗವರ್ಮೆಂಟ್ ಸೆಕರೆಟೆರಿಗೆ, ಅಥವಾ ಸದರೀ ಸಾಮಗ್ರಿಗಳನ್ನು ಯಾವ ಡಿಸ್ಟ್ರಿಕ್ಟಿನಿಂದ ಹೊರಗೆ ತೆಗದುಕ್ಕೊಂಡು ಹೋಗಲಿಕ್ಕೆ ಅಪೇಕ್ಷಿಸುತ್ತಾನೋ ಅಂತಾ ಡಿಸ್ಟ್ರಿಕ್ಟಿನ ಮಾಜಿಸ್ಟ್ರೇಟರಿಗೆ, ಯಾ ಡೆಪ್ಯುಟಿ ಕಮ್ಮಿಷನರಿಗೆ ಯಾ ಇತರ ಮುಖ್ಯ ಕಾರ್‌ಬಾರೀ ಆಫಿಸರರಿಗೆ, ಅಥವಾ ಅಂತಾ ರಹದಾರೀಯನ್ನು ಕೊಡಲಿಕ್ಕೆ ಇಸ್ತಿಹಾರ್ ಮೂಲಕ ಇಂಡ್ಯ ಗವರ್ಮೆಂಟಿನವರಿಂದ ಅಧಿಕಾರ ಕೊಡಲ್ಪಟ್ಟ ಇತರ ಆಫಿಸರರಿಗೆ ರಹದಾರೀಬಗ್ಯೆ ಬರದುಕ್ಕೊಳ್ಳತಕ್ಕ ದ್ದು.

4. ರಹದಾರೀ ಬಗ್ಯೆ ಮಾಡುವ ದರಖಾಸ್ತು ಪ್ರತಿಸಂಗತಿಯಲ್ಲಿಯೂ ಬರವಣಿಗೇಯಲ್ಲಿಯೇ ಇರಬೇಕು, ಅಂತಾ ದರ ಖಾಸ್ತಿನಲ್ಲಿ, ಯಾವ ಸ್ಥಳಕ್ಕೆ ಸಾಮಗ್ರಿಗಳು ಕಳುಹಿಸಬೇಕೆಂದು ಉದ್ದೇಶಿಸಲ್ಪಡುತ್ತೊ ಅಂತಾ ಷಹರ್, ಯಾ ಸ್ವೇಷ್ಟ, ಯಾ ಇತ ರ ಸ್ಥಳ ಇಂತಾದ್ದು ನಮೂದಿರತಕ್ಕದ್ದು, ಮತ್ತು ಸಾಮಗ್ರಿಗಳ ಪರಿಮಿತಿ, ಅದರ ಗುಣ, ವಿವರಣಿ ಮತ್ತು ಅವುಗಳು ಯಾವ ಯಾವ ಬಗ್ಯೆ ಅಪೇಕ್ಷಿಸಲ್ಪಡುತ್ತೋ ಅದು, ಇವುಗಳನ್ನು ಕುರಿತು ಪೂರಾ ತಪಶೀಲ್ ಅಡಗಿರತಕ್ಕದ್ದು. ಸದರೀ ಸಾಮಗ್ರಿಗಳು ದಿಗರ್ ತೀಮೆಯಿಂದ ಆಮದ್ ಆಗಿದ್ದ ಪಕ್ಷಕ್ಕೆ ಯಾವ ಲೈಸೆನ್ಸ್ ಅನುಸರಿಸಿ ಅವುಗಳು ಆಮದ್ ಆದವೋ ಆ ಲೈಸೆನ್ಸ್ ಜಂಟಿಸ ಲ್ಪಟ್ಟಿರತಕ್ಕದ್ದು.

5. ಆ ಮೇರೆ ಕೊಡಲ್ಪಟ್ಟ ಮತ್ತು ಅನ್ಯಥಾ ಹೊಂದಿದ ಬಾತಮಿಾ ದೆಶೆಯಿಂದ ಅಂತಾ ರಹದಾರೀ ನಿರ್ಭಯವಾಗಿ ಕೊಡ ಬಹುದೆಂದು ಯೆಣಿಸುವ ಪಕ್ಷಕ್ಕೆ, ರಹದಾರಿಯನ್ನು ಕೊಡುವದು ಆ ಬಗ್ಯೆ ಅಧಿಕಾರ ಹೊಂದಿದ ಆಫಿಸರರ ಯಿಖ್ತ್ಯಾರೀಯಲ್ಲಿ ರತಕ್ಕದ್ದು. ಹಾಗೆ ಕೊಡಲ್ಪಟ್ಟ ದರೋಬಸ್ತು ರಹದಾರೀಗಳ ಬಾಬತು ಬಂದು ರಿಜಿಸ್ಟರ್ ಇಡಲ್ಪಟ್ಟು ಸದರೀ ಸಾಮಗ್ರಿಗಳು ಯಾ ವ ಸ್ಥಳಕ್ಕೆ ರವಾನೇಯಾಗತಕ್ಕದ್ದಾಗಿರುತ್ತೋ ಅಂತಾ ಸ್ಥಳ ಇರತಕ್ಕ ಡಿಸ್ಟ್ರಿಕ್ಟಿನ ಮಾಜಸ್ಟ್ರೇಟರಿಗೆ ಪ್ರತಿ ರಹದಾರಿಯ ಒಂದು ನಕ್ಕಲ್ ಕಳುಹಿಸಲ್ಪಡತಕ್ಕದ್ದು.

6. ಅಂತಾ ರಹದಾರೀವುಳ್ಳ ಸಾಮಗ್ರಿಗಳು ಮಧ್ಯೆ ಇರುವ ಯಾವ ಸ್ಥಳದೊಳಗೂ ಮಾರಲ್ಪಡದೆ ಅಥವಾ ಉಪಯೋಗಿ ಸಲ್ಪಡದೆ ರಹದಾರೀಯೊಳಗೆ ನಮೂದಿರುವ ಸದರೀ ಸಾಮಗ್ರಿ ತಲಪತಕ್ಕ ಸ್ಥಳಕ್ಕೇನೆ ಪರಭಾರೇ ತೆಗದುಕೊಂಡು ಹೋಗಲ್ಪ ಡತಕ್ಕದ್ದು.

7. ಸಾಮಗ್ರಿಳು ತಲಪತಕ್ಕ ಸ್ಥಳಕ್ಕೆ ತಲಪಿದ ಮೇಲೆ ಅವುಗಳ ಜೆನ್ಮೈಯುಳ್ಳ ಮನುಷ್ಯನು ಆರುದಿನಗಳೊಳಗಾಗಿ ರಹ ದಾರಿಯನ್ನು ಆ ಡಿಸ್ಟ್ರಿಕ್ಟ್ ಮಾಜಿಸ್ಟ್ರೇಟರಿಗೆ ಒಪ್ಪಿಸತಕ್ಕದ್ದು. ತಪ್ಪಾನಿಸಲ್ಪಟ್ಟ ಸದರೀ ಸಾಮಗ್ರಿಗಳು ರಹದಾರೀಯಲ್ಲಿ ಕಂಡ ಖ ತಾಯಿತಿಗಳಿಗೆ ತಾಳೇ ಬೀಳುತ್ತವೆಂದು ತಾನು ತೃಪ್ತಿ ಪಡುವದು, ಮತ್ತು ಏನಾದರೂ ಕಡಮೆ ಯಿದ್ದಲ್ಲಿ ಅದಕ್ಕೆ ತಕ್ಕ ಸಮಜಾ ಯಿಷೀ ಇರುವವನ್ನು ತಿಳಿಯುವದು ಆ ಆಫಿಸರರ ಕೆಲಸವಾಗಿರತಕ್ಕದ್ದು ಬಳಿಕ ಸದರೀ ರಹದಾರೀ ಯಿಂಡಾರ್ಸ್ ಮಾಡಲ್ಪಟ್ಟು, ಯಾವ ಸಾಮಗ್ರಿಗಳ ರವಾನೇ ಬಗ್ಯೆ ಸದರೀ ರಹದಾರೀ ಹುಟ್ಟಿ ಯಿದೆಯೋ ಅಂತಾ ಸಾಮಗ್ರಿಗಳನ್ನು ಯಿಂಡಾರ್ಸ್‌ದಾರನು ನ್ಯಾ ಯವಾಗಿ ತನ್ನ ವಶದಲ್ಲಿಟ್ಟುಕೊಂಡಿರುವ ಪಕ್ಷಕ್ಕೆ ಅವನಿಗೆ ವಾಪಸ್ ಮಾಡಲ್ಪಡುವದು.

ಫೋರ್ಟ್ ವಿಲಿಯಂ, ತಾರೀಖು 12ನೇ ಏಪ್ರೆಲ್ 1876.

ನಂ: 714. ಮಂತ್ರಾಲೋಚಕ ಸಭೆಯೊಳಗಣ ಗವರ್ನರ್ ಜನರಲ್ಲವರು, 1860ನೇ ಇಸವಿಯ 31ನೇ ಆಕ್ಟಿನ 22ನೇ ಸೆಕ್ಷನ್ ದೆಸೆಯಿಂದ ತಮಗೆ ಉಂಟುಮಾಡಲ್ಪಟ್ಟ ಅಧಿಕಾರವನ್ನು ಅನುಸರಿಸಿ, ಮತ್ತು ಈ ವಿಷಯದಲ್ಲಿ ಹಿಂದೆ ಹುಟ್ಟಿದ ದ ರೋಬಸ್ತು ಹುಕ್ಕುಂಗಳನ್ನೂ ರದ್ದುಪಡಿಸಿ ಇಂಡ್ಯದೇಶದ ಯಾವ ಭಾಗದಿಂದಲಾಗಲಿ, ಬ್ರಿಟಿಷ್ ಬರ್ಮಾ ತೀಮೆಯ ಚೀಫ್ ಕಮ್ಮಿಷ ನರ ಅಧಿಕಾರ ಸರಹದ್ದಿನೊಳಗೆ ಬಂಗಾಳಾ ಕೊಲ್ಲಿಯ ಪೂರ್ವ ದಡದ ಯಾವ ರೇವಿಗಾಗಲಿ, ಸದರೀ ಚೀಫ್ ಕಮ್ಮಿಷನರವರು ಕೊ ಟ್ಟ ಲೈಸೆನ್ಸ್ ನಿಜೀ ಹೊರತು ಅನ್ಯಥಾ, ಪೆಟ್ಟುಲ್ಲು ರವಾನಿಸಲ್ಪಡಕೂಡದೆಂದು ನಿಷೇಧಿಸುತ್ತಾರೆ.

ARTHUR HOWELL,
Secy. to the Govt. of India.

ಫಾರಿನ್ ಇಲಾಖಾ.

ಜನರಲ್.

ಇಸ್ತಿಹಾರ್ ನಾಮೆಗಳು.

ತಾರೀಖು 20ನೇ ಏಪ್ರೆಲ್ 1876, ಫೋರ್ಟ್ ವಿಲಿಯಂ.

ನಂಬರ್. 853 G. ಬಡತಿಗಳು,—ಫಸ್ಟ್‌ಕ್ಲಾಸ್ ಡೆಪ್ಯೂಟಿ ಕಮ್ಮಿಷನರ್ ಮೆಜರ್ ಹಿಲ್‌ಸಾಹೆಬರು ಫರಲೋ ರಜಾದ ಮೇ ಲೆ ಹೋದ ಸಬಬ್ ಮೈಸೂರು ಕಮ್ಮಿಷನಲ್ಲಿ ಇದರಡಿ ಬರುವ ಹಂಗಾಮಿ ಬಡತಿಗಳು ಮಾಡಲ್ಪಟ್ಟಿವೆ.